**RW-1** Mis 28/2018

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:28/2018**

ಆರ್.ಡಬ್ಲೂ:01 ಶ್ರೀ ಗೋಪಾಲಪ್ಪ

**ಸಾಕ್ಷಿಯನ್ನು ದಿನಾಂಕಃ 12-06-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ಅರ್ಜಿದಾರರ ಪರ ಶ್ರೀ.ಎನ್ ಎಸ್ ವಕೀಲರಿಂದ**

**1.** ಅರ್ಜಿದಾರರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ **56/2016** ಎಂಬ ದಾವೆಯನ್ನು ನಾನು ಖಾಲಿ ದಾವಾ ಸ್ವತ್ತಿನಲ್ಲಿ ಯಾವುದೇ ಕಟ್ಟಡ ಕಟ್ಟಬಾರದು ಎಂದು ದಾವೆ ಹೂಡಿರುತ್ತಾರೆ ಎಂದರೆ ಹೌದು. ಸದರಿ ದಾವೆಯಲ್ಲಿ ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದು ಅದಕ್ಕೆ ಮೊದಲು ಆದೇಶವಾಗಿದ್ದು ನಂತರ ದಿನಾಂಕ **07.08.2017** ರಂದು ಅರ್ಜಿದಾರರ ಪರವಾಗಿ ಸದರಿ ದಾವಾ ಆಸ್ತಿ ಆದ ಆಸ್ತಿ ಸಂಖ್ಯೆ **177** ರಲ್ಲಿ ಯಾವುದೇ ಕಟ್ಟಡ ಕಟ್ಟಬಾರದು ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಆದರೆ ನಾನು ನನ್ನ ಆಸ್ತಿಯಾದ ಆಸ್ತಿ ಸಂಖ್ಯೆ **211** ರಲ್ಲಿ ಕಟ್ಟಡ ಕಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ನನ್ನ ಪ್ರಕಾರ ಹೇಳಿದ ಆಸ್ತಿ ಸಂಖ್ಯೆ **211** ರ ಚೆಕ್ಕುಬಂದಿ ನನಗೆ ಗೊತ್ತಿದ್ದು ಪೂರ್ವಕ್ಕೆ ವೆಂಕಟೇಶಪ್ಪ ಆಸ್ತಿ, ಪಶ್ಚಿಮಕ್ಕೆ ಆಸ್ತಿ ಸಂಖ್ಯೆ **177,** ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಲಕ್ಷ್ಮಿನಾರಾಯಣಪ್ಪರವರ ಹಿಡುವಳಿ ಜಮೀನು ಇರುತ್ತದೆ.

**2.** ಸದರಿ ಮೇಲೆ ಹೇಳಿದಂತೆ ನನ್ನ ಪಶ್ಚಿಮಕ್ಕೆ ಇರುವ ಆಸ್ತಿ ಸಂಖ್ಯೆ **177** ರ ಪಶ್ಚಿಮಕ್ಕೆ ವೆಂಕಟೇಶಪ್ಪರವರ ಆಸ್ತಿ ಇರುತ್ತದೆ. ಸದರಿ ಆಸ್ತಿ ಸಂಖ್ಯೆ **177** ರಲ್ಲಿ ಒಂದು ಗುಡಿಸಲು ಮನೆ ಇರುತ್ತದೆ. ಸದರಿ ಆಸ್ತಿ ಸಂಖ್ಯೆ **177** ರ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಅರ್ಜಿದಾರರು ಅಸಲು ದಾವೆ ಸಂಖ್ಯೆ **56/2016** ರಲ್ಲಿ ಆದೇಶ ಆದ ನಂತರ ನಾನು ಆತನ ಆಸ್ತಿಯಲ್ಲಿ ಕಟ್ಟಡ ಕಟ್ಟುತ್ತಿದ್ದೇನೆ ಎಂದು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಹೌದು. ಆ ಸಮಯದಲ್ಲಿ ನಾನು ನನ್ನ ಆಸ್ತಿ ಆದ **211** ರಲ್ಲಿ ಕಟ್ಟಡ ಕಟ್ಟಿರುತ್ತೇನೆ. ಅಸಲು ದಾವೆ ಸಂಖ್ಯೆ **56/2016** ರಲ್ಲಿ ಅರ್ಜಿದಾರರು ಪೋಲೀಸ್ ರಕ್ಷಣೆಯನ್ನು ಕೋರಿ ಹಾಕಿದ ಅರ್ಜಿ ಕೂಡ ಪುರಸ್ಕರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಅರ್ಜಿಯಲ್ಲಿ ನನ್ನ ಆಸ್ತಿ ಎಂದು ಹೇಳಲಾದ ಆಸ್ತಿ ಸಂಖ್ಯೆ **211** ಕ್ಕೆ ಸಂಬಂದ ಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಕೊಟ್ಟಿರುತ್ತೇನೆ. ನಾನು ಮೇಲೆ ಹೇಳಿದಂತೆ ನನ್ನ ಆಸ್ತಿ ಎಂದು ಹೇಳಲಾದ **211** ರಲ್ಲಿ ಕಟ್ಟಡ ಕಟ್ಟಿದ್ದು **177** ರಲ್ಲಿ ಅಲ್ಲ ಎಂದು ಹೇಳಿರುವ ವಿಚಾರ ಸುಳ್ಳಾಗಿದ್ದು ನಾನು ನ್ಯಾಯಾಲಯದ ಆದೇಶ ಇದ್ದರೂ ಸಹ ಆಸ್ತಿ ಸಂಖ್ಯೆ **177** ರಲ್ಲಿ ಸದರಿ ಆದೇಶವನ್ನು ಉಲ್ಲಂಘಿಸಿ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

**3.** ಅಸಲು ದಾವೆ ಸಂಖ್ಯೆ **56/2016** ರಲ್ಲಿ ಅರ್ಜಿದಾರರು ಘೋಷಣೆ ಮತ್ತು ಮಾಂಡೇಟರಿ ಇಂಜಕ್ಷನ್ ಆದೇಶ ಕೋರಿ ಅರ್ಜಿಯನ್ನು ಹಾಕಿದ್ದು ಅದರ ಮೇಲೆ ಸದರಿ ದಾವೆಯು ನಡೆಯುತ್ತಿದೆ ಎಂದರೆ ಸರಿ. ನಿ ಆರ್ **1** ರಲ್ಲಿ ನಾನು ಮೇಲೆ ಹೇಳಿದಂತೆ ಆಸ್ತಿ ಸಂಖ್ಯೆ **177** ರ ಪಶ್ಚಿಮಕ್ಕೆ ವೆಂಕಟೇಶಪ್ಪ ರವರ ಜಮೀನು ಎಂದು ನಮೂದಿದೆಯಾ ಎಂದರೆ ಇಲ್ಲ. ನಿ ಆರ್ **1** ರಲ್ಲಿ ನಾನು ಮೇಲೆ ಹೇಳಿದಂತೆ ನನ್ನ ಆಸ್ತಿ ಆದ **211** ರ ಪೂರ್ವಕ್ಕೆ ವೆಂಕಟೇಶಪ್ಪರವರ ಜಮೀನು ಎಂದು ನಮೂದಿದೆಯಾ ಎಂದರೆ ಇದೆ. ಸದರಿ ನಿ ಆರ್ **1** ರಲ್ಲಿ ನನ್ನ ಆಸ್ತಿ ಆದ **211** ರ ಪಶ್ಚಿಮಕ್ಕೆ ಆಸ್ತಿ ಸಂಖ್ಯೆ **177** ಇದ್ದು ಅದರ ನಂತರ ರಸ್ತೆ ಬರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಇಲ್ಲ. ನಾನು ವೆಂಕಟೇಶಪ್ಪರವರ ಜೊತೆ ಸೇರಿಕೊಂಡು ಅರ್ಜಿದಾರರ ಆಸ್ತಿ ಆದ **177** ರಲ್ಲಿ ಕಟ್ಟಡ ಕಟ್ಟಿಕೊಂಡು ನನ್ನ ಆಸ್ತಿ **211** ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ

ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದು ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ನಾನು ನಿ ಆರ್ 1 ನ್ನು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿ ಆರ್ 1 ರ ಪ್ರತಿಯನ್ನು ಸದರಿ ಟಿ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯವರು ನನಗೂ ಕೊಟ್ಟಿರುತ್ತಾರೆ. ಯಾವ ದಿನಾಂಕದಂದು ನನ್ನ ಪ್ರಕಾರ ಸದರಿ ಗ್ರಾಮ ಪಂಚಾಯಿತಿಯವರು ನನಗೆ ಅದರ ಪ್ರತಿಯನ್ನು ಕೊಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಸದರಿ ಟಿ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಗೆ ನಿ ಆರ್ 1 ರ ಪ್ರತಿಯನ್ನು ಕೊಡಿ ಎಂದು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ನಾನು 2018-19 ನೇ ಸಾಲಿನಲ್ಲಿ ಅವರಿಗೆ ನೀಡಿರುತ್ತೇನೆ. ನಾನು ಪುನಃ ಸದರಿ ನಿ ಆರ್ 1 ರ ಪ್ರತಿಗಾಗಿ ಅರ್ಜಿಯನ್ನು ಹಾಕಿದ್ದು ಅವರು ಇತ್ತೀಚೆಗೆ ಸದರಿ ಪ್ರತಿಯನ್ನು ಕೊಟ್ಟಿರುತ್ತಾರೆ.

**4.** ನಿ ಆರ್ 1 ನ್ನು ಸದರಿ ಟಿ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯವರು ಬೇತಮಂಗಲ ಪೋಲೀಸ್ ಠಾಣೆಗೆ ಅರ್ಜಿದಾರರು ಹೇಳಿದಂತೆ ನ್ಯಾಯಾಲಯದ ಆದೇಶದ ಉಲ್ಲಂಘನೆಯ ಸಂದರ್ಭದಲ್ಲಿ ಕೊಟ್ಟಂತಹ ದಾಖಲೆ ಎಂದರೆ ಸಾಕ್ಷಿಯು ಇರಬಹುದು ನಾನಂತೂ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಎನ್ನುತ್ತಾರೆ. ಸದರಿ ನಿ.ಆರ್1 ರಲ್ಲಿ ನನ್ನ ಪ್ರಕಾರ ನಾನು ಕಟ್ಟಡವನ್ನು ಆಸ್ತಿ ಸಂಖ್ಯೆ 211 ರಲ್ಲಿ ಕಟ್ಟಿದ್ದು ಆಸ್ತಿ ಸಂಖ್ಯೆ 177 ರಲ್ಲಿ ಅಲ್ಲ ಎಂದು ನಮೂದಿದೆಯಾ ಎಂದರೆ ಇದೆ. ಸದರಿ ವಿಚಾರವು ನಿ ಆರ್ 1 ರಲ್ಲಿ ಇಲ್ಲದೇ ಇದ್ದರೂ ಸಹ ನಾನು ಅದನ್ನು ಈ ಅರ್ಜಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ ಆರ್2 ರಿಂದ 5 ರಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿಆರ್ 2 ಮತ್ತು 3 ರಲ್ಲಿ ಆ ದಾವೆಯಲ್ಲಿರುವ ಪ್ರತಿವಾದಿ ಆದ ವೆಂಕಟೇಶಪ್ಪರವರು ಆತನ ಆಸ್ತಿಯಲ್ಲಿ ಗುಡಿಸಲು ಕಟ್ಟಿರುತ್ತಾರೆ ಎಂದು ವಜಾ ಮಾಡಿರುತ್ತಾರೆ ಎಂದರೆ ಹೌದು. ಸದರಿ ವೆಂಕಟೇಶಪ್ಪರವರ ಆಸ್ತಿಗೂ ನನಗೂ ಯವುದೇ ಸಂಬಂದ ಇಲ್ಲದೇ ಇದ್ದರೂ ಸಹ ನಾನು ನಿ ಆರ್ 2 ರಿಂದ 5 ದಾಖಲೆಗಳನ್ನು ಈ ಅರ್ಜಿಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**